■ ರಾಜಶೇಖರ ಕುಕ್ಕುಂದಾ, ಬಾಗಲಕೋಟೆ

## ಸೋನ ಪಾಪಡಿ

ಸೋನ ಪಾಪಡಿ
ಸೋನ ಪಾಪಡಿ
ತಂದವರ್‍ಯಾರು?

ಊರಿನ ಸುದ್ದಿ
ಹೇಳ್ತಿದ್ಲಲ್ಲ
ಅಮ್ಮನ ಫ್ರೆಂಡು!

ಸೋನ ಪಾಪಡಿ
ಸೋನ ಪಾಪಡಿ
ತಂದವರ್‍ಯಾರು?

ಪುರಾಣ ಹೇಳ್ತಾ
ಕೂರ್ತಿದ್ನಲ್ಲ
ಅಪ್ಪನ ಫ್ರೆಂಡು!

ಸೋನ ಪಾಪಡಿ
ಸೋನ ಪಾಪಡಿ
ತಂದವರ್‍ಯಾರು?

ಹುಬ್ಬು ಏರಿಸ್ಕೊಂಡು
ಬರ್ತಿದ್ಲಲ್ಲ
ಅಕ್ಕನ ಫ್ರೆಂಡು!

ಸೋನ ಪಾಪಡಿ
ಸೋನ ಪಾಪಡಿ
ತಂದವರ್‍ಯಾರು?

ಬೈಕ್ ಹಾರಿಸ್ಕೊಂಡು
ತಿರಗ್ತಿದ್ನಲ್ಲ
ಅಣ್ಣನ ಫ್ರೆಂಡು!

ಸೋನ ಪಾಪಡಿ
ಸೋನ ಪಾಪಡಿ
ತಿಂದವರ್‍ಯಾರು?

ಆನ್ಲೈನ್ ಪಾಠ
ನಡೀತಿರ್ವಾಗ
ನಾನೇ, ಮತ್ಯಾರು? ■

## ಆಟಕ್ಹೋಗಣ್ಣಾ!

ಕೈ ಕೈ ಹಿಡ್ದು
ಸಣ್ಣಕ್ಹಿಗ್ದು
ಆಟಕ್ಹೋಗಣ್ಣಾ!

ಚಾಟೀ ಹಿಡ್ದು
ಚಕ್ಡೀ ಹೊಡ್ದು
ತೋಟಕ್ಹೋಗಣ್ಣಾ!

ಅಂಗೀ ತೆಗ್ದು
ಚಡ್ಡೀ ಬಿಗ್ದು
ಬಾವೀಗಿಳಿಯೋಣ್ಣಾ!

ಬೆಕ್ಕೀಗ್ಹಿಡ್ದು
ನಾಯೀಗ್ಬಡ್ದು
ದಿಕ್ಕೆಟ್ಹೋಡಣ್ಣಾ!

ಬುತ್ತೀ ಬಿಚ್ಚಿ
ರೊಟ್ಟೀ ಕಚ್ಚಿ
ಕತ್ತಸ್ಹೊರ್ಡಿಯೋಣ್ಣಾ!

ಗುಡ್ಡಾ ಸುತ್ತಿ
ಮ್ಯಾಲಕ್ಹತ್ತಿ
ಮುಗ್ಲೀಗ್ಮುಟ್ಹೋಣ್ಣಾ! ■



ಶಶಿಧರ ಹಳೇಮನಿ

ಎಂದು ಅವನ ಪಾಲಕರಲ್ಲಿ ಕ್ಷಮೆ ಕೋರಿ ಹೊರಟು ಹೋದರು.

ರಂಜಾನ್ ಹಬ್ಬದ ಖುಷಿ ಮಾಯವಾಯಿತು. ಅಹ್ಮದ್ ನೆಲದ ಮೇಲೆ ಹೆಣವಾಗಿ ಬಿದ್ದಿದ್ದ. ಅವನ ತಂದೆ– ತಾಯಿ, ನೆಂಟರು ಬಿಕ್ಕಿ ಬಿಕ್ಕಿ ಅತ್ತರು. ಅವರ ಮನಸ್ಸಿಗೆ ಗಾಸಿಯಾಗಿತ್ತು. ಅವರೆಲ್ಲ ತಮ್ಮೊಳಗೆ ಮಾತಾಡಿಕೊಂಡು, ತಕ್ಷಣ ಆಸ್ಪತ್ರೆಯ ವೈದ್ಯರ ಬಳಿ ಹೋಗಿ ತಮ್ಮ ಅಹವಾಲನ್ನು ಸಲ್ಲಿಸಿದರು.

ಸರ್, ನಾವು ಅಹ್ಮದ್‌ನ ಅಂಗಾಗಗಳನ್ನು ದಾನ ಮಾಡುತ್ತೇವೆ. ದಯವಿಟ್ಟು ಅವಕಾಶ ಮಾಡಿಕೊಡಿ ಎಂದರು. ವೈದ್ಯರು ದಂಗಾಗಿ ಹೋದರು. ಇನ್ನೊಮ್ಮೆ ಸರಿಯಾಗಿ ಆಲೋಚಿಸಿ. ಇದು ಇಸ್ರೇಲಿಗಳ ಆಸ್ಪತ್ರೆ. ಅವರು ನಿಮ್ಮ ಜನಾಂಗದ ಶತ್ರುಗಳು. ಇಲ್ಲಿರುವವರು ಇಸ್ರೇಲಿಗಳ ಮಕ್ಕಳು. ಅವರಿಗೆ ನಿಮ್ಮ ಮಗನ ಅಂಗಾಂಗಗಳನ್ನು ದಾನ ಮಾಡುವಿರಾ? ಎಂದರು.

ಆಗ ಇಸ್ರೇಲಿಗಳ ಆಸ್ಪತ್ರೆಗಳಲ್ಲಿ ಮಾನವ ದೇಹದ ಅಂಗಾಂಗಗಳಿಗೆ ಅಪಾರವಾದ ಬೇಡಿಕೆಯಿತ್ತು. ಆದರೆ ಅಂಗಾಂಗಗಳ ದಾನ, ಧರ್ಮ ವಿರೋಧಿ ಎಂಬ ಭಾವನೆ ಬೇರೂರಿತ್ತು. ಸುದ್ದಿ ತಿಳಿದ ಅಂಗಾಂಗಗಳ ಅವಶ್ಯಕತೆಯಿದ್ದ ಇಸ್ರೇಲಿಗಳ ಮಕ್ಕಳ ತಾಯಿ– ತಂದೆಯರು ಅಹ್ಮದನ ಪಾಲಕರ ಬಳಿ ಬಂದು ಬೇಡಿಕೊಂಡರು.

ಡಾಕ್ಟರ್ ನಾವು ಇಸ್ರೇಲಿಗಳ ಮಕ್ಕಳಿಗೆ ಅಂಗಾಂಗ ದಾನ ಮಾಡಲು ಸಿದ್ಧರಿದ್ದೇವೆ. ಅವನ ಅಂಗಾಂಗಗಳು ಮಣ್ಣು ಪಾಲಾಗುವುದು ಬೇಡ. ಅದೇ ಅವನ ಆತ್ಮಕ್ಕೆ ಶಾಂತಿ ನೀಡುತ್ತದೆ. ದಯವಿಟ್ಟು ಬಳಸಿಕೊಳ್ಳಿ ಎಂದು ಮಾರ್ನುಡಿದರು.

ತಕ್ಷಣ ವೈದ್ಯರು ಶಸ್ತ್ರಚಿಕಿತ್ಸೆಯ ತಯಾರಿ ಮಾಡಿದರು. ಅವನ ಹೃದಯವನ್ನು ಹನ್ನೆರಡು ವರ್ಷದ ಹುಡುಗಿಯೊಬ್ಬಳಿಗೆ ಜೋಡಿಸಲಾಯಿತು. ಆ ಹುಡುಗಿಯ ಪಾಲಕರು 'ನಿಮ್ಮಿಂದ ನಮ್ಮ ಹುಡುಗಿ ಬದುಕಿಕೊಂಡಳು' ಎಂದು ಅಹ್ಮದನ ತಂದೆ– ತಾಯಿಗೆ ಧನ್ಯವಾದ ಹೇಳಿದರು.

ಅಹ್ಮದನ ಮೂತ್ರಪಿಂಡ, ಶ್ವಾಸಕೋಶ, ಪಿತ್ತಜನಕಾಂಗ ಬೇರೆ ಬೇರೆ ಮಕ್ಕಳಿಗೆ ಜೋಡಿಸಿದರು. ಒಬ್ಬ ಅರಬ್ಬಿ ಅಹ್ಮದ ಸತ್ತನಾದರೂ ಅವನ ಅಂಗಾಂಗಗಳು ಐದಾರು ಮಕ್ಕಳು ಬದುಕಲು ನೆರವಾದವು. ತಮ್ಮ ವೈರಿ ದೇಶದ ಮಕ್ಕಳಿಗೆ ಅಂಗಾಂಗಗಳನ್ನು ದಾನ ಮಾಡುವಾಗಲೂ ಅಹ್ಮದನ ಪಾಲಕರು ಚಿಂತಿಸಲಿಲ್ಲ. ಇದೇ ಅಲ್ಲವೇ ಸತ್ತು ಬದುಕುವುದೆಂದರೆ?

ಸತ್ತ ಮೇಲೆ ನಮ್ಮ ಅಂಗಾಂಗಗಳು ಮಣ್ಣಾಗಿಯೋ, ಸುಟ್ಟೋ ಹೋಗುವುದರ ಬದಲಿಗೆ ಅವುಗಳಿಂದ ಯಾರಿಗಾದರೂ ಜೀವದಾನ ಮಾಡಲು ಸಾಧ್ಯವೋ ಎಂಬುದನ್ನು ನಾವು ಜೀವಂತವಾಗಿರುವಾಗಲೇ ಯೋಚಿಸಿದರೆ ಇನ್ನೂ ಚೆನ್ನ ಅಲ್ಲವೇ? ■